**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,</u>**

**<u>ಸಿದ್ಧಾಪುರ</u>**

**<u>ಸಿ.ಸಿ ನಂ.107 /2024</u>**

ಫಿರ್ಯಾದಿ : ಸರ್ಕಾರ : ಪೋಲಿಸ್ ಉಪನಿರೀಕ್ಷಕರು,
ಸಿದ್ದಾಪುರ ಪೋಲಿಸ ಠಾಣೆ,

<u>ವಿರುದ್ಧ</u>

ಆರೋಪಿಗಳ ಹೆಸರು :

1. ಮುರುಳಿ ತಂದೆ ಸೋಮಣ್ಣ ನಾಯರ್
ಪ್ರಾಯಃ 45 ವರ್ಷ, ಉಃ ಕೂಲಿ ಕೆಲಸ,

2. ಶ್ರೀಮತಿ ಶೋಭಾ ಕೋಂ ಮುರುಳಿ ನಾಯರ್
ಪ್ರಾಯಃ 39 ವರ್ಷ, ಉಃ ಗೃಹಿಣಿ,

3. ಹರಿಪ್ರಸಾದ ತಂದೆ ಸೋಮಣ್ಣ ನಾಯರ್
ಪ್ರಾಯಃ 38 ವರ್ಷ, ವೃತ್ತಿಃ ಚಾಲಕ,

4. ಶ್ರೀಮತಿ ನೇತ್ರಾವತಿ ಕೋಂ ಹರಿಪ್ರಸಾದ ನಾಯರ್
ಪ್ರಾಯಃ 30 ವರ್ಷ, ಉಃ ಗೃಹಿಣಿ,
1 ರಿಂದ 4 ರವರ ವಾಸಃ ಮಂಡ್ಲಿಕೊಪ್ಪ ಸಿದ್ದಾಪುರ ತಾಲೂಕು

5. ಶ್ರೀಮತಿ ನೇತ್ರಾವತಿ ಕೆ ಸುರೇಶ
ಪ್ರಾಯಃ 39 ವರ್ಷ, ಉಃಗೃಹಿಣಿ
ವಾಸಃ ಉಧ್ಯಮನಗರ, ಯಲ್ಲಾಪುರ

6. ಅಶೋಕ ತಂದೆ ರಾಮಣ್ಣ ನಾಯರ್
ಪ್ರಾಯ 48 ವರ್ಷ, ಉಃ ಆಚಾರಿ ಕೆಲಸ,
ವಾಸಃ ಶಿವಪ್ಪ ನಾಯಕ ನಗರ, (ಎಸ್ ಎನ್ ನಗರ)
ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

**ದಂಡ ಪ್ರಕಿಯಾ ಸಂಹಿತೆ ಕಲಂ 313 ರಡಿ ಆರೋಪಿಯ ಹೇಳಿಕೆ**

**ಪ್ರಶ್ನೆ:1** ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀಯಾ?

**ಉತ್ತರಃ–**

**ಪ್ರಶ್ನೆಃ 2. ಫ್ರಾಸಾಃ 8/ಚಾಸಾ–10 ಡಾಃ ಶ್ರೇಯಸ್ ಪಂಡಿತ್** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ 29–02–2024 ರಂದು ರಾತ್ರಿ 11–00 ಗಂಟೆಯ ಸಮಯದಲ್ಲಿ 50 ವರ್ಷಯ ವಯಸ್ಸಿನ ಮೋಹನ ಸೊಮಣ್ಣ ನಾಯರ್ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ತಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಅವರನ್ನು ಪರಿಕ್ಷೀಸಿದಾಗ ಹಣೆಯ ಎಡಭಾಗದ ಸ್ವಲ್ಪ ಮೇಲೆ 4cm x 1cm x 1 cm ಉದ್ದ ಹಾಗೂ ಅಗಲದ ಹಾಗೂ ಆಳವಾದ ಗಾಯ ಕಂಡುಬಂದಿರುತ್ತದೆ ಎಂದು, ನಂತರ ಅವರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿರುತ್ತೇನೆಂದು, ದಿಃ 14–03–2024 ರಂದು ತಾನು ಚಾಸಾ–1 ರವರಿಗೆ ನೀಡಿದ ಗಾಯದ ಪ್ರಮಾಣಪತ್ರವನ್ನು ನಿ.ಪಿ –13 ಎಂದು, ಈ ಮೇಲ್ಕಂಡ ಗಾಯವು ತನ್ನ ಅಭಿಪ್ರಾಯದಲ್ಲಿ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಎಂದು, ಒಬ್ಬ ವ್ಯಕ್ತಿಯು ಮೊತ್ತೊಬ್ಬ ವ್ಯಕ್ತಿಗೆ ದೊಣ್ಣೆಯಿಂದ ಹೊಡೆದಾಗ ತನ್ನ ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಗಾಯಗಳು ಆಗುವ ಸಂಭವ ಇರುತ್ತದೆ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರ:–**

**ಪ್ರಶ್ನೆಃ 3. ಫ್ರಾಸಾಃ 9/ಚಾಸಾ–14 ದೇವರಾಜ ಟಿ** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿಃ 29–02–2024 ರಂದು ತಾನು ಠಾಣಾ ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ರಾತ್ರಿ 11–30 ಗಂಟೆಗೆ ಸಿದ್ದಾಪುರ ಆಸ್ಪತ್ರೆಯಿಂದ MLC ಮಾಹಿತಿ ಬಂದಿದ್ದು ಅದರಂತೆ ತಾನು ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುವಾದ ಮೋಹನ ರವರನ್ನು ವಿಚಾರಿಸಿ ದಿನಾಂಕಃ 29–02–2024 ರ ರಾತ್ರಿ 11–45 ಗಂಟೆಯಿಂದ ದಿಃ 01–03–2024 ರ ಬೆಳಿಗಿನ ಜಾವ 12–15 ಗಂಟೆಯವರೆಗೆ

ಅವರ ಹೇಳಿಕೆ ದೂರನ್ನು ಪಡೆದುಕೊಂಡು, ಸದ್ರಿ ಹೇಳಿಕೆ ದೂರಿನ ಸಾರಾಂಶದಿಂದ ಠಾಣೆ ಗುನ್ನಾ ಸಂಖ್ಯೇ 27/2024 ರಂತೆ ಪ್ರಕರಣವನ್ನು ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನೀವೆದಿಸಿಕೊಂಡಿರುತ್ತೇನೆ ಎಂದು, ನಂತರ ತನಿಖೆಯನ್ನು ಮುಂದುವರೆಸಿ ದಿಃ 01-03-2024 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿದ್ದ ಇಬ್ಬರು ಪಂಚರನ್ನು ಬರಮಾಡಿಕೊಂಡು, ದೂರುದಾರರು ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ ಎಂದು, ನಂತರ ಸಿಬ್ಬಂದಿಗಳ ಸಹಾಯದ ಘಟನಾ ಸ್ಥಳದ ಛಾಯಾ ಚಿತ್ರವನ್ನು ಪಡೆದುಕೊಂಡಿರುತ್ತೇನೆ. ನಂತರ ಘಟನಾ ಸ್ಥಳ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ನಂತರ ಕೃತ್ಯಕ್ಕೆ ಬಳಸಿದ ಕಾಡು ಜಾತಿಯ ಬಡಿಗೆಯನ್ನು ದೂರುದಾರರು ತೋರಿಸಿದ್ದು ಅದನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರುತ್ತೇನೆ ಎಂದು, ನಂತರ ವಾಪಸ ಠಾಣೆಗೆ ಬಂದು ವಶಪಡಿಸಿಕೊಂಡ ಬಡಿಗೆಗೆ ಸಂಬಂದಿಸಿದಂತೆ ಸ್ವತ್ತು ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು, ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರ:-**

**ಪ್ರಶ್ನೆಃ** 4 **ಫ್ರಾಸಾಃ 9/ಚಾಸಾ-14 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು,** ಸಾಕ್ಷಿಯು ದೂರನ್ನು ನಿಪಿ.14 ಎಂದು, ಸಹಿಯನ್ನು ನಿಪಿ-14(ಎ) ಎಂದು, ಪ್ರ.ವ.ವರದಿಯನ್ನು ನಿಪಿ.15 ಎಂದು, ಸ್ವತ್ತು ಪಟ್ಟಿಯನ್ನು ನಿ.ಪಿ- 16 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ- 16(ಎ) ಎಂದು, ಪಂಚನಾಮೆಯನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ ) ಎಂದು, ಸಾಕ್ಷಿಯು ಕಚ್ಚಾ ನಕಾಶೆಯನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ ) ಎಂದು, ನಾಲ್ಕು ಫೋಟೋಗಳನ್ನು ನಿ.ಪಿ-3 ರಿಂದ 6 ಎಂದು, ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು MO1 ಎಂದು ಗುರುತಿಸಲಾಗಿರುತ್ತದೆ. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-15 ರವರೆಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರ:-**

**ಪ್ರಶ್ನೆ: 5**. **ಫ್ರಾಸಾಃ 10/ಚಾಸಾ–15 ಅನಿಲ್ ಬಿ** ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿಃ 02–03–2024 ರಂದು ತಾನು ಚಾಸಾ–14 ರವರಿಂದ ಕಡತವನ್ನು ಪಡೆದುಕೊಂಡು ಪರೀಶಿಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ ಎಂದು, ನಂತರ ಅದೇ ದಿನ ಚಾಸಾ–4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು, ಸಾಕ್ಷಿಯು ಚಾಸಾ–4 ರವರ ಹೇಳಿಕೆಯನ್ನು ನಿಪಿ. 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಬಿ ) ಎಂದು, ಸಾಕ್ಷಿಯು ಚಾಸಾ–5 ರವರ ಹೇಳಿಕೆಯನ್ನು ನಿಪಿ. 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ–9(ಬಿ ) ಎಂದು, ಚಾಸಾ–6 ರವರ ಹೇಳಿಕೆಯನ್ನು ನಿಪಿ. 11 ಎಂದು ಸಾಕ್ಷಿಯ ಸಹಿಯನ್ನು ನಿಪಿ–11(ಬಿ ) ಎಂದು, ಚಾಸಾ–7 ರವರ ಹೇಳಿಕೆಯನ್ನು ನಿಪಿ. 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ–10(ಬಿ ) ಎಂದು, ಚಾಸಾ–8 ರವರ ಹೇಳಿಕೆಯನ್ನು ನಿಪಿ. 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ–12(ಬಿ ) ಎಂದು, ಸಾಕ್ಷಿಯು ಚಾಸಾ–9 ರವರ ಹೇಳಿಕೆಯನ್ನು ನಿಪಿ. 17 ಎಂದು, ಸಾಕ್ಷಿಯ ಸಹಿಯನ್ನು ನಿಪಿ–17(ಎ) ಎಂದು , ದಿಃ 03–03–2024 ರಂದು ಈ ಪ್ರಕರಣದ 1 ರಿಂದ 6ನೇ ಆರೋಪಿತರಿಗೆ ಠಾಣೆಗೆ ಹಾಜರಾಗುವಂತೆ ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 41 ರಂತೆ ನೋಟೀಸನ್ನು ನೀಡಿರುತ್ತೇನೆ ಎಂದು, ಸಾಕ್ಷಿಯು ಆರು ನೋಟೀಸಗಳನ್ನು ಕ್ರಮವಾಗಿ ನಿಪಿ.18 ರಿಂದ ನಿ.ಪಿ– 23 ಎಂದು, ಅವುಗಳಲ್ಲಿರುವ ಇರುವ ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿಪಿ–18(ಎ) ರಿಂದ ನಿಪಿ–23(ಎ) ಎಂದು, ಚಾಸಾ–1 ರವರ ಗಾಯದ ಪ್ರಮಾಣ ನೀಡುವಂತೆ ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ನಿವೇದನಾ ಪತ್ರವನ್ನು ನಿಪಿ.24 ಎಂದು, ಸಾಕ್ಷಿಯ ಸಹಿಯನ್ನು ನಿಪಿ–24(ಎ) ಎಂದು, ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರ:–**

**ಪ್ರಶ್ನೆ: 6**. **ಫ್ರಾಸಾಃ 10/ಚಾಸಾ–15 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು,** ದಿನಾಂಕಃ 11–03–2024 ರಂದು ಚಾಸಾ–11 ರವರು ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು, ಸಾಕ್ಷಿಯು ಸದರಿ ವರದಿಯನ್ನು ನಿಪಿ.25 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ–25(ಎ) ಎಂದು, ನಂತರ ಚಾಸಾ–12 ರವರು ತನಿಖೆಗೆ ಸಹಕರಿಸಿದ ಬಗ್ಗೆ ವರದಿಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು, ಸಾಕ್ಷಿಯ ಸ್ದ್ರಿ ವರದಿಯನ್ನು ನಿಪಿ.26 ಎಂದು, ಸಾಕ್ಷಿಯ ಸಹಿಯನ್ನು ನಿಪಿ–26(ಎ) ಎಂದು, ಚಾಸಾ–13

ರವರು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ನಂತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು, ಸದ್ರಿ ಪ್ರಮಾಣ ಪತ್ರವನ್ನು ನಿಪಿ.27 ಎಂದು, ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು, ದಿಃ 14-03-2024 ರಂದು ಸರ್ಕಾರಿ ಆಸ್ಪತ್ರೆ ವೈದ್ಯರು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು, ದಿಃ 25-03-2024 ರಂದು ತನಿಖೆಯನ್ನು ಪೂರ್ಣಗೊಳಿದ್ದು ಆರೋಪಿತರ ವಿರುದ್ಧ ಆರೋಪ ಸಾಬೀತಾದ ಕಾರಣ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು, ನ್ಯಾಯಾಲಯದ ಮುಂದೆ 1ನೇ ಆರೋಪಿಯನ್ನು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರ:-**

**ಪ್ರಶ್ನೆಃ 7**. ಈ ಪ್ರಕರಣ ಕುರಿತು ನಿನಗೆ ಇನ್ನು ಏನಾದರೂ ಹೇಳುವುದು ಇದೆಯೇ ?

ಉತ್ತರಃ

**ಪ್ರಶ್ನೆಃ 8**. ನಿನ್ನ ಪರವಾಗಿ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀಯಾ?

ಉತ್ತರಃ

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **07-09-2026** ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**